**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.54/2020**

ಪ್ರಾ.ಸಾ. 13

ಚಾ.ಸಾ. 20

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 28.02.2026**

| | |
|---|---|
| ಸಾಕ್ಷಿದಾರರ ಹೆಸರು | ಸುಹಾಸ್ |
| ತಂದೆಯ ಹೆಸರು | ಮರಿಸ್ವಾಮೀಗೌಡ |
| ವಯಸ್ಸು | 28 ವರ್ಷ |
| ಉದ್ಯೋಗ | ಬ್ಯಾಂಕ್ ನೌಕರ, ಡಿಬಿಎಸ್ ಬ್ಯಾಂಕ್ |
| ವಾಸ | ಕೊಂಗಬೋರನದೊಡ್ಡಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು 2019 ರಲ್ಲಿ ವಿದ್ಯಾರ್ಥಿಯಾಗಿದೆ. ಚಾಸಾ.19 ನನ್ನ ಮಿತ್ರ. ನಿಪಿ.27 ರಲ್ಲಿ ನನ್ನ ಸರಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ.27 ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಮದ್ದೂರು ಪೊಲೀಸ್ ಠಾಣೆಯಲ್ಲಿ 5-6 ವರ್ಷಗಳ ಹಿಂದೆ ಮಾಡಿದ್ದೇನೆ. ಪೊಲೀಸರು ಮಹಜರು ಎಂದು ಹೇಳಿ ನನ್ನ ಸಹಿ ಪಡೆದರು. ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ. ಆ ಕಾಲಕ್ಕೆ ನನಗೆ ತೋರಿಸಿದ ಮು.ಮಾ.8 ರಿಂದ ಮು.ಮಾ.10 ನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಲ್ಲ. ನನ್ನ ಜೊತೆ ಗುರು ಚಾಸಾ.19 ಕೂಡ ಸಹಿ ಮಾಡಿದ್ದಾನೆ. ಸದರಿ ಸಹಿಯನ್ನು ನಾನು ಬೆಳಗ್ಗೆ ಮಾಡಿದ್ದೇನೆ. ನಿಪಿ.28 ರಲ್ಲಿ ನಾನೂ ಕೂಡ ಇದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ ನಾನು ನಿಪಿ.27 ಕ್ಕೆ ಸಹಿ ಮಾಡುವಾಗ ಠಾಣೆಯಲ್ಲಿ ಯಾರೆಲ್ಲಾ ಇದ್ದರು ಎಂದು ಗೊತ್ತಾಗುವುದಿಲ್ಲ. ನಾನು ಈಗ ನೋಡುತ್ತಿರುವ ಫೊಟೋದಲ್ಲಿ ನಾನು ಇದ್ದೇನೆ. ಸದರಿ ಫೊಟೋವನ್ನು

ಮದ್ದೂರು ಪೊಲೀಸ್ ಠಾಣೆಯಲ್ಲಿ ನಾನು ನಿಪಿ.27 ಕ್ಕೆ ಸಹಿ ಮಾಡಿದ ದಿವಸ ತೆಗೆದಿದ್ದಾರೆ. ಸದರಿ ಫೋಟೋದಲ್ಲಿ ಚಾಸಾ.19 ಇದ್ದಾರೆ. ಆದರೆ ಆರೋಪಿಗಳ ಪೈಕಿ ಯಾರೆಲ್ಲಾ ಇದ್ದಾರೆಂದು ಹೇಳಲು ಆಗುವುದಿಲ್ಲ. ಮು.ಮಾ.8 ರಿಂದ ಮು.ಮಾ.10 ನ್ನು ಸುತ್ತಿದ ಬಿಳಿ ಬಟ್ಟೆಯಲ್ಲಿ ಅಂಟಿಸಿದ ಚೀಟಿಯಲ್ಲಿ ನನ್ನ ಸಹಿ ಇದೆ. ಸದರಿ ಸಹಿಗಳನ್ನು ನಾನು ಠಾಣೆಯಲ್ಲಿ ಮಾಡಿದ್ದೇನೆ. ಯಾವ ಕಾರಣಕ್ಕೆ ಮಾಡಿದ್ದೇನೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

2. ದಿನಾಂಕ 04.07.2019 ರಂದು ಮದ್ದೂರು ವೃತ್ತ ನಿರೀಕ್ಷಕರ ಕಛೇರಿಗೆ ನನ್ನನ್ನು ಸಂಜೆ 5.00 ಗಂಟೆಗೆ ಕರೆಸಿ, ನ್ಯಾಯಾಲಯದ ಮುಂದಿರುವ 2 ಮತ್ತು 3 ಹಾಗೂ ಗೈರು ಹಾಜರು ಇರುವ 1 ನೇ ಆರೋಪಿಗಳ ಸಮಕ್ಷಮ ಅವರು ತಮ್ಮ ವಶದಲ್ಲಿದ್ದ ಈಗ ನನಗೆ ತೋರಿಸಿದ ಮುದ್ದೆ ಮಾಲುಗಳ ಪೈಕಿ ಮು.ಮಾ.8 ನ್ನು 1 ನೇ ಆರೋಪಿಯಿಂದ, ಮು.ಮಾ.9 ನ್ನು 2 ನೇ ಆರೋಪಿಯಿಂದ, ಮು.ಮಾ.10 ನ್ನು 3 ನೇ ಆರೋಪಿಯಿಂದ ವಶಪಡಿಸಿಕೊಂಡು ಸಂಜೆ 5.00 ರಿಂದ 5.30 ಗಂಟೆವರೆಗೆ ನಿಪಿ.27 ರಂತೆ ಮಹಜರು ಕ್ರಮ ಜರುಗಿಸಿ, ನನ್ನ ಸಹಿಯನ್ನು ಪಡೆದರು ಎಂದರೆ ಸರಿಯಲ್ಲ. ನನ್ನ ಜೊತೆ ಗುರು ಕೂಡ ಹಾಜರು ಇದ್ದು, ನಾವಿಬ್ಬರೂ ಆರೋಪಿಗಳು ಮೊಬೈಲುಗಳನ್ನು ಹಾಜರುಪಡಿಸುವಾಗ ಹಾಜರು ಇದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ.28 ರಂತೆ ಫೋಟೋ ತೆಗೆದಿದ್ದಾರೆ ಎಂದರೆ ಸಾಕ್ಷಿ ನನ್ನ ಎದುರು ಏನೂ ಕೊಡಲಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 24.07.2019 ರಂದು ನಾನು ಹೇಳಿಕೆ ನೀಡಿ, ಆ ಹೇಳಿಕೆಯಲ್ಲಿ ಎಲ್ಲಾ ಆರೋಪಿತರು ರಾಕೇಶ್ ಅಲಿಯಾಸ್ ರಾಕಿ ಎಂಬುವವನ್ನು ಕೊಲೆ ಮಾಡಿದ್ದಾರೆ ಎಂಬ ವಿಚಾರ ನನಗೆ ತಿಳಿಯಿತು ಎಂದು ಹೇಳಿದ್ದೇನೆಂದರೆ ಸರಿ. ನನ್ನ ಸಮಕ್ಷಮ ಪೊಲೀಸರು ಮೊಬೈಲನ್ನು ಅಮಾನತ್ತುಪಡಿಸಿಕೊಂಡಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಅಮಾನತ್ತುಪಡಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಪಿ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.